

# ಸೈಫಿ ಎಂಬ ಫೀನಿಕ್ಸ್

(39ನೇ ಪುಟದಿಂದ)
ನೀಡುತ್ತಿದ್ದಾಗ ಸೈಫಿ ಹುಟ್ಟಿದರು. ಪತ್ನಿ ಮುಸ್ಲಿಂ, ಪತಿ ಕ್ರಿಶ್ಚಿಯನ್. ಮಗನಿಗೆ ಎರಡೂ ಧರ್ಮದ ಹೆಸರು ಸೇರಿಸಿ ಸೈಫಿ ವಿಲಿಯಂ ಎಂದು ಹೆಸರಿಟ್ಟರು.

ನಾಲ್ಕು ಮಕ್ಕಳ ತಾಯಿಯಾದ ನಂತರ ಹಶ್ಮಿತ್, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಸ್ ತ್ಯಜಿಸಿ ಮುಂಬೈಗೆ ಹೋಗಿ ನೆಲೆಸಿದರು. ಪತಿ ವಿಲಿಯಂ 'ಗ್ರೇಟ್ ಬಾಂಬೆ ಸರ್ಕಸ್' ಸೇರಿದರು. ವಿಲಿಯಂ ಅಹಮದಾಬಾದ್‌ನಲ್ಲಿ ಸ್ಟಂಟ್ ಮಾಡುತ್ತಿರುವುದಾಗಲೇ ಬಿದ್ದು ಗಾಯಗೊಂಡು ನಿಧನರಾದರು.

ವಿಲಿಯಂ ಸಾವಿನ ನಂತರ ಕುಟುಂಬದ ಹೊಣೆ ಮಗ ಸೈಫಿ ಮೇಲೆ ಬಿತ್ತು. ಆ ಸಂದರ್ಭದಲ್ಲಿ ಸೈಫಿ ಇರಾನ್‌ಗೆ ದುಡಿಯಲು ತೆರಳಿದರು. 1977ರಲ್ಲಿ ನಡೆದ ಯುದ್ಧದಲ್ಲಿ ನಿರಾಶ್ರಿತರಾಗಿ ಟರ್ಕಿ, ಬಲ್ಗೇರಿಯಾ, ಇಟಲಿಗೆ ಬರಬೇಕಾಯಿತು.

## ಹುಬ್ಬಳ್ಳಿ ನಂಟು...

11 ವರ್ಷ ಇಟಲಿಯ ಫೆರಾರಿಯಲ್ಲಿ ದುಡಿದ ಸೈಫಿ ಮುಂಬೈಗೆ ಹಿಂದಿರುಗಿದರು. ಮುಂಬೈನ ಹಲವು ಕಾರು ಕಂಪೆನಿಗಳಲ್ಲಿ ಕೆಲಸ ಮಾಡಿದ ಅವರು ನಟ ಜಾಕಿ ಶ್ರಾಫ್ ಸೇರಿ ಬಾಲಿವುಡ್ ನಟರು, ಕ್ರೀಡಾಪಟುಗಳ ಐಷಾರಾಮಿ ಕಾರುಗಳಿಗೆ ಹೊಸ ರೂಪ ಕೊಡುತ್ತಿದ್ದರು. ತಾಯಿ ಕಡೆಯ ಸಂಬಂಧಿಕರಿಂದ ಅವರು ಹುಬ್ಬಳ್ಳಿಯ ಸೂಫಿಯಾ ಅವರನ್ನು ಮದುವೆಯಾದರು.

2005ರ ಮುಂಬೈ ಮಹಾಮಳೆ ಸಂದರ್ಭದಲ್ಲಿ ಪತ್ನಿಯನ್ನು ಬಿಡಲು ಸೈಫಿ ಹುಬ್ಬಳ್ಳಿಗೆ ಬಂದಿದ್ದರು. ಆ ವೇಳೆ ಹುಬ್ಬಳ್ಳಿ, ಗಬ್ಬೂರ್ ಕ್ರಾಸ್‌ನಲ್ಲಿದ್ದ ಅಮ್ಯೂಸ್‌ಮೆಂಟ್ ಪಾರ್ಕ್ (ಡಿಸ್ನಿ ಪಾರ್ಕ್) ಮಾಲೀಕ ಮಹೇಶ್ ದಂಡ್ ಅವರನ್ನು ಭೇಟಿಯಾದರು. ಮಹೇಶ್‌ಗೆ ಸೈಫಿಯ ಪರಿಚಯ ಮೊದಲೇ ಇತ್ತು. ಹೀಗಾಗಿ ಸೈಫಿಯನ್ನು ಹುಬ್ಬಳ್ಳಿಯಲ್ಲೇ ಉಳಿಸಿಕೊಂಡು ತಮ್ಮ ಡಿಸ್ನಿ ಪಾರ್ಕ್‌ನಲ್ಲಿ ಎಂಜಿನಿಯರ್ ಹುದ್ದೆ ಕೊಟ್ಟರು.

ಮಹೇಶ್ ನಿಧನದ ನಂತರ ಪಾರ್ಕ್ ನಿಂತು ಹೋಯಿತು. ನಂತರ ಸೈಫಿ ಗೋಕುಲ್ ರಸ್ತೆಯ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಐಷಾರಾಮಿ ಕಾರು, ಬೈಕ್‌ಗಳಿಗೆ ರೂಪ ಕೊಡುವ 'ಸೈಫಿ ಗ್ಯಾರೇಜ್' ತೆಗೆದರು. ನಾಲ್ಕು ವರ್ಷದ ಹಿಂದೆ ಹುಬ್ಬಳ್ಳಿ ಏರ್‌ಪೋರ್ಟ್ ರಸ್ತೆಯಲ್ಲಿ ಬೈಕ್ ಅಪಘಾತ ಉಂಟಾಗಿ ತಮ್ಮ ಬಲಗಾಲು ಕಳೆದುಕೊಂಡರು. ಒಂದು ಕಾಲು ಹೋದರೂ ಕೆಲಸ ನಿಲ್ಲಿಸದ ಅವರು ಜೈಪುರ ಕಾಲು ಅಳವಡಿಸಿಕೊಂಡು ಕೆಲಸ ಮುಂದುವರಿಸಿದರು.

10 ತಿಂಗಳ ಹಿಂದೆ ಸೈಫಿ ಬೈಕ್‌ನಲ್ಲಿ ತೆರಳುತ್ತಿದ್ದಾಗ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಎಡಗಾಲನ್ನೂ ಕಳೆದುಕೊಂಡರು. ಆಗ ಮೂರು ತಿಂಗಳು ಕೋಮಾ ಸ್ಥಿತಿಯಲ್ಲಿದ್ದ ಅವರು ಬದುಕಿದ್ದೇ ಹೆಚ್ಚು.

'ನಾನು ಗರ್ಭದಲ್ಲಿದ್ದಾಗಲೂ ನನ್ನ ತಾಯಿ ಬೈಕ್ ಸ್ಟಂಟ್ ಮಾಡುತ್ತಿದ್ದರಂತೆ. ಹೀಗಾಗಿ ನನ್ನ ರಕ್ತದಲ್ಲಿ ಸರ್ಕಸ್ ಇದೆ. ತಂದೆ ಬೈಕ್ ಸಾಹಸ ಮಾಡುವಾಗಲೇ ತೀರಿಕೊಂಡರು. ಈಗ ನಾನು ಸರ್ಕಸ್‌ನಲ್ಲಿ ಇಲ್ಲದಿದ್ದರೂ ಇಡೀ ಜಗತ್ತು ನನಗೆ ಸರ್ಕಸ್ ಥರಾ ಕಾಣಿಸುತ್ತದೆ. ಎರಡು ಕಾಲು ಹೋದರೂ ನನಗೆ ಅಷ್ಟು ಬೇಗ ಸಾವು ಬರುವುದಿಲ್ಲ. ನಾನು 100 ವರ್ಷ ಬದುಕುತ್ತೇನೆ' ಎನ್ನುವ ಸೈಫಿ ವಿಲಿಯಂ ಫೀನಿಕ್ಸ್ ಹಕ್ಕಿಯಂತೆ ಮತ್ತೆ ಎದ್ದು ಬಂದಿದ್ದಾರೆ. ಹಳೇ ಹುಬ್ಬಳ್ಳಿಯ ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿರುವ 61 ವರ್ಷದ ಸೈಫಿ ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಹಿರಿಯ ಮಗಳು ಎಂ.ಎಸ್ಸಿ ಕಲಿತಿದ್ದು ಶಾಲಾ ಶಿಕ್ಷಕರಾಗಿದ್ದಾರೆ. ಕಿರಿಯ ಮಗಳು ಸಿ.ಎ ಕಲಿಯುತ್ತಿದ್ದಾರೆ.

## ಹೊಸ ಕನಸು

ಆರೇಳು ತಿಂಗಳ ಕಾಲ ಹಾಸಿಗೆ ಹಿಡಿದಿದ್ದ ಸೈಫಿ ಈಗ ಹೊಸ ಕನಸುಗಳೊಂದಿಗೆ ಎದ್ದು ಬಂದಿದ್ದಾರೆ. ಮತ್ತೆ ಮಕ್ಕಳ ಕಾರು, ಬೈಕ್ ಮಾಡುವ ಉದ್ದೇಶದಿಂದ ಹುಬ್ಬಳ್ಳಿಯ ಗೋಕುಲ್ ರಸ್ತೆ ಇಂಡಸ್ಟ್ರಿಯಲ್ ಬಡಾವಣೆಯಲ್ಲಿ ಹೊಸ ವರ್ಕ್‌ಶಾಪ್‌ನಲ್ಲಿ ಯಂತ್ರ ಹಿಡಿದು ಕುಳಿತಿದ್ದಾರೆ. ಖಾಸಗಿ ಮಾಲೀಕರೊಬ್ಬರು ಅವರ ಕನಸುಗಳಿಗೆ ನೀರೆರೆದಿದ್ದಾರೆ. ಎರಡು ಕಾಲು ಇಲ್ಲದಿದ್ದರೂ ತೆವಳಿಕೊಂಡೇ ವೆಲ್ಡಿಂಗ್ ಮಾಡುತ್ತಿದ್ದಾರೆ. ಬೈಕ್ ಓಡಿಸಲು ಅಸಾಧ್ಯ ಸ್ಥಿತಿಯಲ್ಲಿರುವ ಅವರು ಟ್ರೈಸಿಕಲ್ ಹತ್ತಿದ್ದಾರೆ. ಐಷಾರಾಮಿ ಕಾರು, ಬೈಕ್ ಓಡಿಸುತ್ತಿದ್ದ ಅವರು ಈಗ ಮೂರು ಚಕ್ರದ ಗಾಡಿಯ ಪೆಡಲ್ ತಿರುಗಿಸುತ್ತಾ ಹಳೇಹುಬ್ಬಳ್ಳಿಯಿಂದ ಗೋಕುಲ್ ರಸ್ತೆ ಇಂಡಸ್ಟ್ರಿಯಲ್ ಎಸ್ಟೇಟ್ (7 ಕಿ.ಮೀ) ವರೆಗೆ ಬರುತ್ತಾರೆ.

'ಕಾಲುಗಳು ಹೋದರೆ ಹೋಗಲಿ ಬಿಡಿ. ಮನಸ್ಸು ಇನ್ನೂ ಗಟ್ಟಿ ಇದೆ. ಎರಡು ಕೈಗಳು ಹೋದರೂ ಕೆಲಸ ಮಾಡುತ್ತೇನೆ. ಮಕ್ಕಳ ಮನಸ್ಸಿಗೆ ಒಪ್ಪುವ ರೀತಿಯಲ್ಲಿ ಕ್ರಿಯಾಶೀಲವಾಗಿ ಕಾರು, ಬೈಕ್ ತಯಾರಿಸುತ್ತೇನೆ. ಈ ಕಾರು, ಬೈಕ್‌ಗಳನ್ನು ಬಳಸುವ ಬಗೆಯನ್ನು ಮಕ್ಕಳಿಗೆ ಉಚಿತವಾಗಿ ಹೇಳಿಕೊಡುತ್ತೇನೆ' ಎಂದು ಹೇಳುವ ಸೈಫಿ ವಿಲಿಯಂ ಅಂಗವಿಕಲ ಎನ್ನುವ ಪದಕ್ಕೆ ಅಪವಾದವೆಂಬಂತೆ ಕಾಣುತ್ತಾರೆ.

ಇರಾನಿ, ಇಟ್ಯಾಲಿಯನ್, ಅರೇಬಿಕ್, ಲ್ಯಾಟಿನ್, ಫ್ರೆಂಚ್, ಇಂಗ್ಲಿಷ್, ಹಿಂದಿ, ಮರಾಠಿ, ಪಂಜಾಬಿ ಸೇರಿ 10 ಭಾಷೆ ಬಲ್ಲವರಾದ ಅವರು ಭಾಷಾ ಜ್ಞಾನ ಬಳಸಿಕೊಂಡು ತಾವು ಉತ್ಪಾದಿಸಿದ ಕಾರುಗಳನ್ನು ಹೊರದೇಶಗಳಿಗೂ ರಫ್ತು ಮಾಡುವ ಚಿಂತನೆಯಲ್ಲಿದ್ದಾರೆ. ಸೈಫಿ ವಿಲಿಯಂ ಅವರ ಜೊತೆ ಮಾತನಾಡಲು 91 89518 92400 ಸಂಪರ್ಕಿಸಬಹುದು.